# ಅಪರೂಪದ ಅತಿಥಿ

ಚಿತ್ರ– ಬರಹ:
**ಶ್ಯಾಮಲಾ ಮಾಧವ ಮುಂಬಯಿ**



ಕೆಲದಿನಗಳಿಂದ ಆಗೀಗ ಕರ್ಕಶವಾಗಿ ಕಿವಿಗಳಿಗಪ್ಪಳಿಸುತ್ತಿದ್ದ ಗೊರಗೊರ ಸದ್ದಿಗೆ ಬೆಚ್ಚಿ, 'ಇದೇನಪ್ಪಾ, ಈ ಕಾಗೆಗೇನಾಗಿದೆ?' ಎಂದು ಅಚ್ಚರಿಗೊಂಡಿದ್ದೆ. ವಾರದ ಹಿಂದಷ್ಟೇ ಈ ಗೊರಗೊರ ಸದ್ದಿನೊಂದಿಗೆ ಮರಿಗಳ ಕ್ಲಕ್ ಕ್ಲಕ್ ಕ್ಲಕ್ ಸ್ವರವೂ ಎಡೆಬಿಡದೆ ಕೇಳಿಸ ತೊಡಗಿದಾಗ, ನನ್ನ ಕಿಟಕಿಯೆದುರಿನ ಮರದ ಎತ್ತರದ ಕೊಂಬೆಗಳಲ್ಲಿ ಕುತೂಹಲದಿಂದ ಕಣ್ಣು ಹಾಯಿಸಿದೆ. ನಮ್ಮ ಮೇಲಿನ ಐದನೇ ಮಹಡಿಯನ್ನೂ, ಅಗಸಿಯನ್ನೂ ಮೀರಿ ಎತ್ತರ ಬೆಳೆದ, ದೇವದಾರು ವೃಕ್ಷದ ಎತ್ತರದ ಕೊಂಬೆಗಳ ಸಂದಿನಲ್ಲಿ ಕುರುಚಲು ಕಡ್ಡಿಗಳನ್ನಿಟ್ಟು ಮಾಡಿದ ಹಕ್ಕಿ ಗೂಡೊಂದು ಗೋಚರಿಸಿತು. ಬೀಸುಗಾಳಿಗೆ ಮರ ಅತ್ತಿತ್ತ ಹೊಯ್ದಾಡುವಾಗ, ಆ ಕಪ್ಪನೆ ಗೂಡಿನ ಮೇಲೆ ಬೆಳ್ಳನೆ ಆಕಾರವೊಂದು ಕಂಡಂತಾಯ್ತು. ಗಾಳಿಗೆ ಮರದ ರೆಂಬೆಗಳು ಇನ್ನಷ್ಟು ಬಾಗಿದಾಗ, ಬೆಳ್ಳನೆ ಆಕಾರದ ಮೇಲ್ಮೈಯ ಬೂದು ನೀಲ ವರ್ಣ ಕಂಡಿತು.

ಬೆಳ್ಳನೆ ಹಕ್ಕಿಯ ಕಪ್ಪುಕಣ್ಣುಗಳ ಮೇಲಿಂದ ನೀಲ ಮುಸುಕಿನಂತಹ ಜುಟ್ಟು, ಪೆಂಗ್ವಿನ್‌ನಂತೆ ತೋರುತ್ತಿತ್ತು. ಫೋಟೋ ಕ್ಲಿಕ್ಕಿಸಿ ಕಿಶೋರ್ ತೇಜಸ್ವಿಗೆ ಮಿಂಚಂಚೆಯಲ್ಲಿ ಚಿತ್ರ ಕಳುಹಿಸಿದಾಗ, 'ಇದು ಬ್ಲ್ಯಾಕ್ ಕ್ರೌನ್ಡ್ ನೈಟ್ ಹೆರಾನ್' ಎಂಬ ಮಾಹಿತಿ ನೀಡಿದ. ವಿಕಿಪೀಡಿಯಾದಲ್ಲಿ ಪರಾಂಬರಿಸಿದರೆ, ಈ ಅತಿಥಿ ಬ್ಲ್ಯಾಕ್ ಕ್ರೌನ್‌ಡ್ ಹಳದಿ ಬಣ್ಣದ್ದು ಆಗಿರದೆ, ಮೇಲ್ಮೈಯಲ್ಲಿ ಬೂದು ನೀಲವರ್ಣ ತಾಳಿತ್ತು. ಗೂಡಿನಲ್ಲಿ ಎರಡು ಮರಿಗಳಿದ್ದುವು. ಅವೂ ಗಾತ್ರದಲ್ಲಿ ಸಾಕಷ್ಟು ದೊಡ್ಡದಿದ್ದವು. ಇನ್ನೂ ಸರಿಯಾಗಿ ರೂಪುಗೊಳ್ಳದ ಆ ಮರಿಗಳಿಗೆ ತಾಯ್ತಂದೆಯ ಆಕರ್ಷಕ ರೂಪ ಇನ್ನೂ ಬಂದಿರಲಿಲ್ಲ. ಚಟುವಟಿಕೆಯಿಂದಿರುವಾಗ ಸತತ ಕ್ವಾಕ್ ಕ್ವಾಕ್ ಎಂದು ಉಲಿಯುತ್ತಿದ್ದುವು.

ಹೆಚ್ಚಾಗಿ ಒಂದೇ ಹಕ್ಕಿ ಇರುತ್ತಿದ್ದರೂ, ಆಗೀಗ ಸಂಗಾತಿ ಹಕ್ಕಿಯೂ ಬಂದು ಜೊತೆಗಿರುತ್ತಿತ್ತು. ಮರದ ಒತ್ತಾದ ರೆಂಬೆಗಳಿಂದಾಗಿ ಅವುಗಳ ಪೂರ್ಣ ದರ್ಶನ ಅಲಭ್ಯವಾಗಿತ್ತು.

ಬ್ಲ್ಯಾಕ್ ಕ್ರೌನ್‌ಡ್ ನೈಟ್ ಹೆರಾನ್‌ಗಳ ಪ್ರಾಣಿಶಾಸ್ತ್ರೀಯ ಹೆಸರು ನಿಕ್ಟಿಕೊರಾಕ್ಸ್ ನಿಕ್ಟಿಕೊರಾಕ್ಸ್. ಇವುಗಳ ನಿಶಾಚರ ಸ್ವಭಾವ ಮತ್ತು ಕರ್ಕಶ ಸ್ವರದಿಂದಾಗಿಯೇ ಈ ಹೆಸರು ಬಂದಿದೆ. ಉತ್ತರ, ದಕ್ಷಿಣ ಅಮೆರಿಕಾ, ಕೆನಡಾ, ಅರ್ಜೆಂಟೀನಾ, ಚಿಲಿ, ಯುರೇಷಿಯಾ, ಆಫ್ರಿಕಾ ಖಂಡಗಳಲ್ಲಿ ವಾಸವಾಗಿರುವ ಇವು ವಲಸೆ ಹಕ್ಕಿಗಳೂ ಹೌದು. ಮರಗಳಲ್ಲಿ, ಗೂಡುಗಳಲ್ಲಿ ಹಗಲು ಕಳೆವ ಇವು, ರಾತ್ರಿ ಹಾಗೂ ಮುಂಜಾವಗಳಲ್ಲಿ ನೀರದಡದಲ್ಲಿ ಜಲಚರಗಳನ್ನು ಹೊಂಚು ಹಾಕಿ ಕಬಳಿಸುತ್ತವೆ. ಕೊಕ್ಕರೆ ಜಾತಿಯ ಇತರ ಪಕ್ಷಿಗಳಂತಿರದೆ, ಬಲಿಷ್ಠವಾಗಿರುವ ಇವು ಚಿಕ್ಕ ಕೊಕ್ಕು, ಕತ್ತು, ಕಾಲುಗಳನ್ನು ಹೊಂದಿರುತ್ತವೆ. ತಲೆಯ ಹಿಂಭಾಗದಿಂದ ಹೊರಟಿರುವ ಎರಡು ಉದ್ದನೆಯ ಬಿಳಿಯ ಗರಿಗಳು ಆಕರ್ಷಕವಾಗಿವೆ.

ಮುಂಬೈಯ ಘಾಟ್‌ಕೋಪರ್ ಪೂರ್ವ ಪ್ರದೇಶದ ಹಲವು ಮರಗಳನ್ನು ಆಶ್ರಯಿಸಿ ಈ ಹಕ್ಕಿ ಗೂಡು ಕಟ್ಟಿಕೊಳ್ಳಬಹುದು. ಎರಡು ತಿಂಗಳ ಹಿಂದೆ, ಹಳದಿ ಬಣ್ಣದ ಹೂಗಳ ಈ ಮರವನ್ನು ಕಡಿಯಲು ಬಂದಿದ್ದರು. ಆದರೆ ನಾನು ಕಡಿಯಲು ಬಿಡಲಿಲ್ಲ. ಇಲ್ಲವಾಗಿದ್ದಲ್ಲಿ, ಈ ಅಪರೂಪದ ಅತಿಥಿಯನ್ನು ನೋಡುವ ಭಾಗ್ಯ ಸಿಗುತ್ತಿರಲಿಲ್ಲ.

